# ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 938/2024**

**CW : 06 PW: 04**

**ವಿಡಿಯೋ ಕಾನ್ಫೆರೆನ್ಸ ಮೂಲಕ ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 16.04.2026**

| | |
|---|---|
| ಹೆಸರು | : ರಾಚಮ್ಮ |
| ಗಂಡನ ಹೆಸರು | : ರಾಜಕುಮಾರ |
| ವಯಸ್ಸು | : 34 |
| ಉದ್ಯೋಗ | : ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : ಮಡಿಕೇರಿ |

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ಚಿತ್ತಾಪುರ ವಲಯದಲ್ಲಿ ನಾನು ಅಬಕಾರಿ ಉಪ ನಿರೀಕ್ಷಕರು ಎಂದು ದಿ: 07/08/2023 ರಿಂದ 10/01/2025 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ: 06/01/2024 ರಂದು ನಾನು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-1 ಇವರಿಂದ ಪಡೆದುಕೊಂಡಿದ್ದು ಇರುತ್ತದೆ. ದಿ: 08/01/2024 ರಂದು ಪಿ.ಡಿ.ಓ ರಾವೂರ ಇವರಿಗೆ ಮಾಲೀಕತ್ವವನ್ನು ಅರಿಯಲು ಒಂದು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ದಿ: 29/01/2024 ರಂದು ಸದರಿಯವರ ಪಿ.ಡಿ.ಓ ರಾವೂರ ಇವರಿಂದ ವರದಿಯನ್ನು ಸಲ್ಲಿಸಿದ್ದು ಅದನ್ನು ನಾನು ಕಡತಕ್ಕೆ ಅಳವಡಿಸಿಕೊಂಡಿದ್ದು ಇರುತ್ತದೆ. ದಿ: 13/09/2024 ರಂದು ಸಾಕಷ್ಟು ಸಾಕ್ಷ್ಯಾಧಾರಗಳು ಇದ್ದ ಕಾರಣ ನಾನು ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದು ಇರುತ್ತದೆ.

ಪಿ.ಡಿ.ಓ ರವರಿಗೆ ಬರೆದ ಪತ್ರವನ್ನು ನಿ.ಪಿ.8 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.8 (ಎ) ಎಂದು, ವರದಿಯನ್ನು ನಿ.ಪಿ.9 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.9 (ಎ) ಎಂದು ನಿಶಾನೆಗೊಳಿಸಲಾಯಿತು. ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 3 ಎಂದು ನಿಶಾನೆಗೊಳಿಸಲಾಗಿದೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>**

ದಿ: 06/01/2024 ರಂದು ನಾನು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-1 ಇವರಿಂದ ಪಡೆದುಕೊಂಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ: 08/01/2024 ರಂದು ಪಿ.ಡಿ.ಓ ರಾವೂರ ಇವರಿಗೆ ಮಾಲೀಕತ್ವವನ್ನು ಅರಿಯಲು ಒಂದು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ: 29/01/2024 ರಂದು ಸದರಿಯವರ ಪಿ.ಡಿ.ಓ ರಾವೂರ ಇವರಿಂದ ವರದಿಯನ್ನು ಸಲ್ಲಿಸಿದ್ದು ಅದನ್ನು ನಾನು ಕಡತಕ್ಕೆ ಅಳವಡಿಸಿಕೊಂಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಕಾ ಅವಧಿಯಲ್ಲಿ ಪಿ.ಡಿ.ಓ ಅವರನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳದ ಖಾತಾ ಉತಾರನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಮುಂದುವರೆದು ಸಾಕ್ಷಿದಾರರು ವರದಿಯನ್ನು ಮಾತ್ರ ನೀಡಿದ್ದು ಇರುತ್ತದೆ ಎಂದು ನುಡಿಯುತ್ತಾರೆ. ಪ್ರಕಣದಲ್ಲಿ ನಾನು ಪ್ರತ್ಯಕ್ಷ ಸಾಕ್ಷಿದಾರರನ್ನು ಪಡೆಯಲು ಪ್ರಯತ್ನಿಸಿದ್ದು ಇರುತ್ತದೆ.

ಘಟನ ಸ್ಥಳದಲ್ಲಿ ದೊರಕಿದ ಸ್ಟೀಲ್ ಡಬ್ಬಿಯನ್ನು ನಾನು ವಶಪಡಿಸಿಕೊಂಡಿರುವುದಿಲ್ಲ. ಅದರಂತೆಯೇ ಘಟನ ಸ್ಥಳದಲ್ಲಿ ದೊರಕಿದ ನೀಲಿ ಬಣ್ಣದ ಬ್ಯಾರಲನ್ನು ನಾನು ವಶಪಡಿಸಿಕೊಂಡಿರುವುದಿಲ್ಲ. ಘಟನ ಸ್ಥಳದಲ್ಲಿ ದೊರಕಿದ ಪ್ಲಾಸ್ಟಿಕ ಕೊಡಗಳನ್ನು ನಾನು ವಶಪಡಿಸಿಕೊಂಡಿರುವುದಿಲ್ಲ. ಅವುಗಳ ನಮೂನೆ ಮತ್ತು ಬಣ್ಣದ ಬಗ್ಗೆ ನನಗೆ ಹೇಳಲು ಬರುವುದಿಲ್ಲ.

ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ಇವರಿಗೆ ಸಹಾಯಗೊಳಿಸಲು ಅವರ ಬೆಂಬಲವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**